ಓ. ಎಸ್. ನಂಬರ:-8/2025

ಪಿ.ಡಬ್ಲೂ-:-1 : ಅನೀತಾ ಗಂಡ ಬಾಬು ಹಣಜಿ

ದಿನಾಂಕ:- 27-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು : ಶ್ರೀ ಕೆ ಜಿ ಪಿ ವಕೀಲರಿಂದ.</u>

ನಮ್ಮ ತಂದೆಗೆ ದಾವಾ ಆಸ್ತಿ ಖರೀದಿ ಸಮಯದಲ್ಲಿ ವಯಸ್ಸು ಆಗಿತ್ತು ಎಂದರೆ ಸರಿ. ನನ್ನ ಸಹೋದರನಾದ ಹುಚ್ಚಪ್ಪ ದುಡಿಯಲು ಚಿಕ್ಕವನಿದ್ದಾಗಿನಿಂದ ಮುಂಬೈಗೆ ಹೋಗಿದ್ದ ಎಂದರೆ ಸರಿ. ಹುಚ್ಚಪ್ಪ ಮುಂಬೈಗೆ ಹೋದಾಗ ೩-೪ ವರ್ಷದವಳು ಇದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ದೊಡ್ಡವಳು ಇದ್ದೆ ನನ್ನ ಮದುವೆ ಆಗಿತ್ತು ಎನ್ನುತ್ತಾರೆ. ನಮ್ಮ ತಂದೆಗೆ ನಾನು ೫ನೇ ಮಗಳು ಆಗಿರುತ್ತೇನೆ. ಹುಚ್ಚಪ್ಪ ಮುಂಬೈಗೆ ಹೋದಾಗ ೧೫ ರಿಂದ ೧೬ ವರ್ಷದವನಿದ್ದ ಎಂದರೆ ಸರಿ. ಹುಚ್ಚಪ್ಪ ಹಣ ಸಂಪಾದನೆ ಮಾಡಿಕೊಂಡು ನಮ್ಮ ತಂದೆಯ ಹತ್ತಿರ ಬರುತ್ತಿದ್ದ ಎಂದರೆ ಸರಿ. ಸಾಕ್ಷಿಯು ಎಲ್ಲರೂ ಕೂಡಾ ಸಂಪಾದನೆ ಮಾಡುತ್ತಿದ್ದರು ಎನ್ನುತ್ತಾರೆ. ೩ನೇ ಪ್ರತಿವಾದಿ ಹುಚ್ಚಪ್ಪರವರು ತಾವು ಸಂಪಾದನೆ ಮಾಡಿದ ಹಣದಿಂದ ನಮ್ಮ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ತಂದೆ ನಮ್ಮ ಮದುವೆ ಮಾಡಿರುತ್ತಾರೆ ಎನ್ನುತ್ತಾರೆ. ನಮ್ಮ ಮನೆತನಕ್ಕೆ ಯಾವುದೆ ಆದಾಯ ಇರಲಿಲ್ಲ ಎಂದರೆ ಸರಿ. ಹುಚ್ಚಪ್ಪ ತನ್ನ ಸಂಪಾದನೆಯಿಂದ ದಾವಾ ಆಸ್ತಿಗಳನ್ನು ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ತಂದೆ ಮತ್ತು ನನ್ನ ಎಲ್ಲ ಸಹೋದರರು ಸೇರಿಕೊಂಡು ಖರೀದಿಸಿರುತ್ತಾರೆ ಎನ್ನುತ್ತಾರೆ.

೨. ನಾನು ನನ್ನ ಗಂಡನ ಮನೆಗೆ ಹೋಗಿ ೧೪ ವರ್ಷದ ನಂತರ ಜಮೀನು ಖರೀದಿ ಮಾಡಲಾಗಿರುತ್ತದೆ. ನನ್ನ ಮಗಳನ್ನು ನಾನು ಸಹೋದರನಾದ ಮತ್ತು ೬ನೇ ಪ್ರತಿವಾದಿಯ ಚಂದ್ರಶಾರವರಿಗೆ ಮದುವೆ ಮಾಡಿಕೊಟ್ಟಿರುತ್ತೇನೆ. ಈಗ ನನ್ನ ತಮ್ಮ ಮತ್ತು ನನಗೆ ಜಗಳ ಬಂದು ನನ್ನ ಮಗಳು ಈಗ ನಮ್ಮ ಮನೆಯಲ್ಲಿ ಇರುತ್ತಾಳೆ ಎಂದರೆ ಸರಿ. ನನ್ನ ಮಗಳು ಗಂಡನ ಮನೆಯಲ್ಲಿ ೪ ವರ್ಷ ೨ ತಿಂಗಳು ಇದ್ದಳು. ನನ್ನ ಮಗಳ ಮದುವೆ ಆಗಿ ಸುಮಾರು ೮ ವರ್ಷ ಆಗಿರುತ್ತವೆ. ನಾನು ನನ್ನ ಮಗಳನ್ನು ನಡೆಸಿಕೊಂಡಿಲ್ಲ ಎಂಬ ಉದ್ದೇಶದಿಂದ ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿ. ಸಾಕ್ಷಿಯು ನಮ್ಮ ತಂದೆಯ ಪಾಲು ನನಗೆ ಬೇಕು ಎಂದು ಹಾಕಿರುತ್ತೇನೆ ಎನ್ನುತ್ತಾರೆ.

೩. ನನ್ನ ಸಹೋದರನಾದ ೩ನೇ ಪ್ರತಿವಾದಿ ಹುಚ್ಚಪ್ಪರವರು ದಾವಾ ಆಸ್ತಿಗಳನ್ನು ನಮ್ಮ ತಂದೆಯ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಖರೀದಿ ನೀಡಿದವರನ್ನು ತಂದು ಸಾಕ್ಷಿ ಮಾಡಿಸುತ್ತಿರಾ ಎಂದರೆ ಸಾಕ್ಷಿಯು ಅವರು ೩ನೇ ಪ್ರತಿವಾದಿ ಹುಚ್ಚಪ್ಪನ ಮಾತನ್ನು ಕೇಳುತ್ತಾರೆ ಎನ್ನುತ್ತಾರೆ. ದಾವಾ ಆಸ್ತಿಗಳು ನನ್ನ ಸಹೋದರನಾದ ಹುಚ್ಚಪ್ಪನ ಸ್ವಯಾರ್ಜಿತ ಆಸ್ತಿಗಳಾಗಿದ್ದರೂ ಸಹ ಮತ್ತು ನನಗೆ ದಾವಾ ಆಸ್ತಿಗಳಲ್ಲಿ ಯಾವುದೆ ಹಕ್ಕು ಇರದೆ ಇದ್ದರೂ ಸಹ ನಾನು ಒಂದು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.